

ರಾಜ್ಯಭಾಷೆಗಳು ಆದ್ಯತೆಯ ವಿಷಯವಾಗಿಯೇ ಇಲ್ಲ. ಬಹುತೇಕ ಖಾಸಗಿ ಶಾಲೆಗಳ ಹಿಂದೆ ಸರ್ಕಾರಿ ಪ್ರತಿನಿಧಿಗಳೇ ಇದ್ದಾರೆ. ಈ ಪ್ರತಿನಿಧಿಗಳು ಎಲ್ಲ ಪಕ್ಷಗಳಲ್ಲೂ ಇದ್ದಾರೆ. ಹಾಗಾಗಿ, ಖಾಸಗಿ ಶಾಲೆಗಳ ಹಿತಾಸಕ್ತಿಯನ್ನು ರಕ್ಷಿಸುವುದು ಸರ್ಕಾರಗಳ ಹಿಡನ್ ಅಜೆಂಡಾ ಕೂಡ ಆಗಿದೆ. ವಾಸ್ತವ ಹೀಗಿರುವಾಗ ಶಿಕ್ಷಣ ಮಾಧ್ಯಮದಲ್ಲಿ ರಾಜ್ಯಭಾಷೆಗಳನ್ನು ಅಪೇಕ್ಷಿಸುವುದು ಹೇಗೆ?

ಸರ್ಕಾರಿ ಶಾಲೆಗಳನ್ನು ಬಲಪಡಿಸಬೇಕು ಎನ್ನುವ ಕೂಗು ಪ್ರತಿ ವರ್ಷ ಕೇಳಿಸುತ್ತಿರುತ್ತದೆ. ಆಗುತ್ತಿರುವುದಾದರೂ ಏನು? ಪ್ರತಿ ಶೈಕ್ಷಣಿಕ ವರ್ಷವೂ ಕನ್ನಡ ಶಾಲೆಗಳನ್ನು ಮುಚ್ಚುತ್ತಿರುವುದು.

ಕನ್ನಡ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಹಾಗೂ ಅವುಗಳನ್ನು ಖಾಸಗಿ ಶಾಲೆಗಳಷ್ಟೇ ಸಶಕ್ತಗೊಳಿಸುವ ನಿಟ್ಟಿನಲ್ಲಿ ಭಾರೀ ಜನಾಂದೋಲನ ನಡೆಯಬೇಕಾದುದು ಇಂದಿನ ಅಗತ್ಯ. ಆದರೆ, ಈ ಆಂದೋಲನವನ್ನು ಯಾರು ಯಾಕಾಗಿ ನಡೆಸುತ್ತಾರೆ ಎನ್ನುವುದೇ ದೊಡ್ಡ ಪ್ರಶ್ನೆ. ಈಚಿನ ದಿನಗಳಲ್ಲಿ, ಭಾವುಕತೆಯ ರೂಪದಲ್ಲಿ ಕೂಡ ಭಾಷೆಯ ಮೌಲ್ಯ ಕ್ಷೀಣಿಸುತ್ತಿರುವಂತಿದೆ.

